ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1280(1310)**
ಸದಸ್ಯರ ಹೆಸರು	**ಶ್ರೀ ಪಾಟೀಲ್ ಎಂ ವೈ (ಆಫ್ ಜಲ್‌ಪುರ)**
ಸಚಿವರು ಹೆಸರು	**ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)**

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ನೀಡಲಾದ ಹಣವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

2006–07 ನೇ ಸಾಲಿನಲ್ಲಿ ಇದುವರೆವಿಗೆ ಮುಜರಾಯಿ ಇಲಾಖೆಯಿಂದ 1652 ದೇವಸ್ಥಾನಗಳಿಗೆ ರೂ 8,07,05,000/–ಹಣ ಮಂಜೂರು ಮಾಡಿದೆ ಜಿಲ್ಲಾವಾರು ಪಟ್ಟಿ <u>ಅನುಬಂಧ–1ರಲ್ಲಿ</u> ಲಗತ್ತಿಸಿದೆ)

ಆ) 2006–07 ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮುಜರಾಯಿ ಇಲಾಖೆಯಿಂದ ಬಿಡುಗಡೆ ಮಾಡಿದ ಹಣ ಎಷ್ಟು?

2006–07 ನೇ ಸಾಲಿನಲ್ಲಿ ಇದುವರೆವಿಗೆ ಗುಲ್ಬರ್ಗಾ ಜಿಲ್ಲೆಯ 113 ಸಂಸ್ಥೆಗಳಿಗೆ ರೂ 38 95 ಲಕ್ಷ ಅನುದಾನ ಮಂಜೂರು ಮಾಡಿದೆ

ಇ) ಆಫಜಲಪುರ ತಾಲ್ಲೂಕಿಗೆ ಬಿಡುಗಡೆಯಾದ ಹಣ ಎಷ್ಟು?

ಆಫಜಲಪುರ ತಾಲ್ಲೂಕಿನ 8 ದೇವಾಲಯಗಳಿಗೆ ತಲಾ 0 25 ಲಕ್ಷದಂತೆ ಒಟ್ಟು 2 00 ಲಕ್ಷ ರೂ ಗಳ ಹಣ ಮಂಜೂರು ಮಾಡಿದೆ

ಈ) ಆಫಜಲಪುರ ತಾಲ್ಲೂಕಿಗೆ ಪ್ರಸ್ತುತ ಸಾಲಿನಲ್ಲಿ ಹಣ ಬಿಡುಗಡೆ ಮಾಡಲಾಗುವುದೇ?

ಆಫಜಲಪುರ ತಾಲ್ಲೂಕಿನ 8 ಧಾರ್ಮಿಕ ಸಂಸ್ಥೆಗಳಿಗೆ ಮಂಜೂರಾದ ಅನುದಾನದಲ್ಲಿ ಈಗಾಗಲೇ 3 ಧಾರ್ಮಿಕ ಸಂಸ್ಥೆಗಳಿಗೆ ತಲಾ ರೂ 25,000/–ಗಳಂತೆ ಒಟ್ಟು ರೂ 75,000/– ಗಳನ್ನು ಬಿಡುಗಡೆ ಮಾಡಲಾಗಿದೆ

ಉಳಿದ 5 ಸಂಸ್ಥೆಗಳು ದಾಖಲಾತಿಗಳನ್ನು ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು

2006–07ನೇ ಸಾಲಿನಲ್ಲಿ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ / ಜೀರ್ಣೋದ್ಧಾರ ಕಾಮಗಾರಿಗಾಗಿ ಜಿಲ್ಲಾವಾರು ಅನುದಾನ ಮಂಜೂರು ಮಾಡಿರುವ ವಿವರ

ಕ್ರ. ಸಂ	ಜಿಲ್ಲೆ	ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಮಂಜೂರು ಮಾಡಲಾದ ಮೊತ್ತ (ರೂ ಲಕ್ಷಗಳಲ್ಲಿ)
1	ಉತ್ತರ ಕನ್ನಡ	30	14 50
2	ಉಡುಪಿ	38	35 50
3	ತುಮಕೂರು	119	38 05
4	ಶಿವಮೊಗ್ಗ	95	64 30
5	ರಾಯಚೂರು	39	12 75
6	ಮೈಸೂರು	54	35 75
7	ಮಂಡ್ಯ	115	38 50
8	ಕೊಪ್ಪಳ	44	14 00
9	ಕೋಲಾರ	47	18 50
10	ಕೊಡಗು	53	61 50
11	ಹಾವೇರಿ	77	24 50
12	ಹಾಸನ	78	30 00
13	ಗುಲ್ಬರ್ಗಾ	113	38 95
14	ಗದಗ್	24	10 00
15	ಧಾರವಾಡ	28	17 00
16	ದಕ್ಷಿಣ ಕನ್ನಡ	83	86 00
17	ದಾವಣಗೆರೆ	81	34 65
18	ಚಿತ್ರದುರ್ಗ	35	16 75
19	ಚಿಕ್ಕಮಗಳೂರು	67	34 25
20	ಚಾಮರಾಜನಗರ	31	10 75
21	ವಿಜಾಪುರ	71	27 25
22	ಬೀದರ್	20	9 50
23	ಬಳ್ಳಾರಿ	92	39 00

24	ಬೆಳಗಾವಿ	97	38 10
25	ಬೆಂಗಳೂರು ನಗರ	22	12 80
26	ಬೆಂಗಳೂರು ಗ್ರಾಮಾಂತರ	44	20 25
27	ಬಾಗಲಕೋಟೆ	55	23 95
	ಒಟ್ಟು	**1652**	**807 05**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1281(1338)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)
ಉತ್ತರಿಸಬೇಕಾದ ಸಚಿವರು ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ ರೈತರ ಸಾಲ ಮನ್ನಾ ಮಾಡಲಾಗುವುದೇ?

ಆ ಯಾವ ಯಾವ ರೈತರ ಸಾಲ ಮನ್ನಾ ಮಾಡಲಾಗುವುದು?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01 04 2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31 12 2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ

ಇ) ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಹೊರೆಯಾಗುವುದೆಷ್ಟು? ಅದನ್ನು ಯಾವ ಮೂಲಗಳಿಂದ ಭರಿಸಲಾಗುವುದು?

ಮೇಲೆ ತಿಳಿಸಿದಂತೆ ಮನ್ನಾಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ